**ಮೇಃ ಪ್ರಧಾನ  ದಿವಾಣಿ ನ್ಯಾಯಾಧೀಶರು ಹಾಗೂ  ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

CC-809/2012
CW-1 /PW-2

**ದಿನಾಂಕಃ 11-12-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

| | |
|---|---|
| ಹೆಸರು | ಜ್ಯೋತಿ ಪಾಟೀಲ |
| ತಂದೆ ಹೆಸರು | ಗುರುಸಿದ್ದಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಮುಧೋಳ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ ಃ**

ನನ್ನ ಸ್ವಂತ ಬೀಳಗಿ ತಾಲೂಕಿನ ಕೊರ್ತಿ ಗ್ರಾಮ ಇರುತ್ತದೆ. ನಾನು ಸುಮಾರು 20 ವರ್ಷಗಳಿಂದ ನಾನು ಮುಧೋಳದ ಹೌಸಿಂಗ ಕ್ವಾಲನಿಯ ಒಂದು ಬಾಡಿಗೆ ಮನೆಯಲ್ಲಿ ವಾಸ ಇರುತ್ತೇನೆ. ಸದರಿ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗಳು ವಾಸ ಇದ್ದೇವೆ.

2012 ನೇ ವರ್ಷದಲ್ಲಿ 10 ನೇ ತಾರೀಕಿನಂದು ತಿಂಗಳು ನೆನಪಿಲ್ಲ, ಆ ದಿನ ನಾನು, ನನ್ನ ಮಗಳು, ನನ್ನ ತಾಯಿ ತಂದೆ ಕೂಡಿಕೊಂಡು ಧಾರವಾಡಕ್ಕೆ ನಮ್ಮ ಸಂಬಂದಿಕರ ಮದುವೆಗೆ ಹೋಗಿದ್ದೇವು. ನನ್ನ ಗಂಡ ಮನೆಯಲ್ಲಿ ಇರದೆ ಹೋಲದ ಕೇಲಸಕ್ಕಾಗಿ ಮನೆಯಿಂದ ಹೊರಗೆ ಹೋಗಿದ್ದರು. ಮನೆ ಬೀಗ ಹಾಕಿತ್ತು.

ದಿನಾಂಕ 12 ನೇ ತಾರೀಕಿನಂದು ಮದ್ಯಾಹ್ನ 1-30 ರ ಸಮಯದಲ್ಲಿ ನನ್ನ ಮೋಬೈಲಗೆ ಚಾಸಾ-7 ರವರು ಕರೆ ಮಾಡಿ ನಮ್ಮ ಮನೆಯ ಬೀಗ ಮೂರಿದಿರುವ  ವಿಷಯ ತಿಳಿಸಿದರು. ನನ್ನ ತಾಯಿ ನಮಗಿಂತ ಮುಂಚೆಯೇ ದಾರವಾಡದಿಂದ ಖಿಲ್ಲಾ ಹೋಸಕೊಟಿ ಗ್ರಾಮಕ್ಕೆ ಹೋದರು. ಅವರು ಮನೆಯ ಕೀಲಿ ಹಾಕಿಕೊಂಡು ಎದುರುಗಡೆ ಮನೆಯವರಿಗೆ ಕೀಲಿ ಕೊಟ್ಟು ಹೋಗಿರುತ್ತಾರೆ. ನಂತರ ನಮ್ಮ ಮನೆಯ ಬೀಗದ ಕೈಯನ್ನು ಮುರಿದು ಕಬ್ಬಿಣದ ಅಲೇಮಾರನ್ನು ಓಡೆದಿರುತ್ತಾರೆ. ಹಿಂದಿನ ಬಾಗಿಲನ್ನು ಓಡೆದುಕೊಂಡು ಬಂದು ಯಾರೋ ಕಳ್ಳರು ಒಳಗಿ ನುಗ್ಗಿರುತ್ತಾರೆ.

ನಾನು ವಿಷಯ ತಿಳಿದು ಮನೆಗೆ ಬಂದಾಗ ಸಂಜೆ 4-00 ಗಂಟೆ ಆಗಿತ್ತು. ನಾನು ಒಳಗೆ ಹೋಗಿ ನೋಡಲಾಗಿ ಕಬ್ಬಿಣದ ಅಲೇಮಾರನ್ನು ಮುರಿಯಲಾಗಿತ್ತು. ಅದನ್ನು ತೆಗೆದು ನೋಡಲಾಗಿ ಬಂಗಾರ ಕಳ್ಳತನವಾಗಿತ್ತು. ಮೂರು ಎಳೆಯ ಬಂಗಾರದ ಚಪ್ಲಹಾರ, ಒಂದು ಮುತ್ತಿನ ಸರ ಮತ್ತು ಬಳೆ ಒಟ್ಟು 17 ತೋಲೆ ಬಂಗಾರ ಕಳ್ಳತನವಾಗಿತ್ತು.

ನಂತರ ಜಯಪ್ರಕಾಶ ಮತ್ತು ಸತೀಶ ಪಾಟೀಲ ಎನ್ನುವ ನಮ್ಮ ಸಂಬಂಧಿಕರು ನಮ್ಮ ಮನೆಗೆ ಬಂದರು.

ನಾನು ಘಟನೆಯ ಸಂಬಂದ ಪಿರ್ಯಾದನ್ನು ನೀಡಿದ್ದೇನೆ. ಪಿರ್ಯದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ನಾನು ಪಿರ್ಯಾದನ್ನು ನೀಡಿದ ದಿನವೆ ಪೋಲಿಸರು ಘಟನಾ ಸ್ಥಳಕ್ಕೆ ಬಂದ್ದಿದ್ದ್ಮರು, ತನೀಖೆಯನ್ನು ಕೈಗೊಡರು ಮತ್ತು ಪಂಚರು ಸಹ ಹಾಜರಿದ್ದರು.

ಕಳ್ಳತನವಾದ ಸ್ಥಳ ಮತ್ತು ಕೊಠಡಿಯಲ್ಲಿ ಮುರಿದ ಅಲೇಮಾರನ್ನು ನಾನು ತೋರಿಸಿರುತ್ತೇನೆ.

ಈಗ ತೋರಿಸುತ್ತಿರುವ ನಿಪಿ-4 ಮತ್ತು 5 ರ ಭಾವಚಿತ್ರಗಳಲ್ಲಿ ನಾನು ಇದ್ದೇನೆ. ನಿಪಿ-4 ನ್ನು ನಮ್ಮ ಮನೆಯ ಒಳಗಡೆ ತೆಗೆಯಲಾಗಿದೆ. ನಿಪಿ-5 ರ ಭಾವಚಿತ್ರವನ್ನು ಮನೆಯ ಹಿಂದಿನ ಭಾಗದಲ್ಲಿ ತೆಗೆಯಲಾಗಿದೆ.

ನಂತರ ಸ್ವಲ್ಪ ದಿನದ ನಂತರ ನಮ್ಮ ಮನೆಯ ಕಾರು ಚಾಲಕ ಮತ್ತು ಆತನ ಜೊತೆ 4-5 ಜನರು ಕೂಡಿ ಕಳ್ಳತನ ಮಾಡಿದ ವಿಷಯ ಪೋಲಿಸರಿಂದ ಗೊತ್ತಾಯಿತು.

ನಂತರ ನಾನು ಪೋಲಿಸ ಠಾಣೆಗೆ ಹೋಗಿದ್ದೇನು, ಆಗ ಕಳ್ಳತನ ಮಾಡಿದವರನ್ನು ನಮಗೆ ತೋರಿಸಲಾಯಿತು.

ಆದಿ ನಾನು ಪೋಲಿಸ ಠಾಣೆಯಲ್ಲಿ ಕೃತ್ಯ ಎಸಗಿದವರನ್ನು ತೋರಿಸಿದ ವ್ಯಕ್ತಿಗಳು ಈಗ ಅವರು ನ್ಯಾಯಾಲಯದ ಮುಂದೆ ಇದ್ದಾರೆ.

ನಮ್ಮ ಮನಯಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ನ್ಯಾಯಾಲಯದ ಮುಂದೆ ಇದ್ದಾನೆ, ಅವನು ಈಗ ನ್ಯಾಯಾಲಯದಲ್ಲಿ ಎಡಭಾಗದಲ್ಲಿ ಮೊದಲನೆಯವನಾಗಿ ಕುಳಿತಿದ್ದಾನೆ. ಆದರೆ ಆತನ ಹೆಸರು ನೆನಪಿಲ್ಲ.

ಈಗ ತೋರಿಸುತ್ತಿರುವ ನಿಪಿ-10 ರ ಭಾವಚಿತ್ರದಲ್ಲಿ ಆರೋಪಿತರು ನಮ್ಮ ಮನೆಯಿಂದ ಕಳ್ಳತನ ಮಾಡಿದ ಆಭರಣಗಳು ಇವೆ.

ಈಗ ತೋರಿಸುತ್ತಿರುವ ಬಾಗಿಲಿಗೆ ಹಾಕಿದ್ದ ಅಲ್ಯುಮಿನಿಯಂ ಕೊಂಡಿ, ಬಾಗಿಲಿಂದ ಕಿತ್ತು ಬಿದ್ದಿದ್ದ್ಮ ಅಲ್ಯುಮಿನಿಯಂ ಹುಕ್ಕಗಳು ನಮ್ಮ ಮನೆಯಿಂದ ಸಿಕ್ಕಿದ್ದವುಗಳಾಗಿವೆ ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟಿ ಸವಾಲು- ಶ್ರೀ ಎ.ಪಿ.ಪಿ ವಕೀಲರಿಂದ :**

ದಿನಾಂಕ 10.06.2012 ರಂದು ನಾನು ನಮ್ಮ ಸಂಬಂದಿಕರ ಮದುವೆಗೆ ದಾರವಾಡಕ್ಕೆ ಹೋಗಿದ್ದು ಎಂದರೆ. ದಿನಾಂಕ 12.06.2012 ರಂದು ಮದ್ಯಾಹ್ನ 12-30 ರ ಸಮಯಕ್ಕೆ ಚಾಸಾ-9 ರವರು ನನಗೆ ಪೋನ ಮುಖಾಂತರ ಘಟನೆಯಾದ ವಿಷಯವನ್ನು ತಿಳಿಸಿದರು ಎಂದರೆ ಸರಿ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ ಚಪ್ಲಹಾರ ಅದು ಐದು ತೋಲೆಯದ್ದು ಎಂದರೆ ಸರಿ. ಲಾಂಗ ಚೈನ 4 ½ ತೊಲೆ ಇತ್ತು ಎಂದರೆ ಸರಿ. ಮೂರು ಎಳೆಯ ಮುತ್ತಿನ ಸರ ಅದು 2 ½ ತೊಲೆ ಇತ್ತು ಎಂದರೆ ಸರಿ. ಮುತ್ತಿನ ಬಳೆ 1 ½ ತೊಲೆ ಇತ್ತು ಎಂದರೆ ಸರಿ. ಬಿಲ್ವಾರ 3 ತೊಲೆ ಎಂದರೆ ಸರಿ. ಚೈನ ½ ತೊಲೆ ಇತ್ತು ಎಂದರೆ ಸರಿ.

ನಾನು ಪಿರ್ಯಾದನ್ನು ನೀಡಿದ ಮಾರನೆ ದಿನ 13.06.2012 ರಂದು ಸ್ಥಳ ಮಹಜರನ್ನು ಜರುಗಿಸಿ ಸ್ಟೀಲ ನಮೂನೆಯ ಸೈಕಲಮೋಟಾರನ ಕಿಕ್ ಲೀವರನ್ನು ಜಪ್ತುಪಡಿಸಿಕೊಂಡರೆ ಎಂದರೆ ಸರಿ. ಅದನ್ನು ಮು.ಮಾ-3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ 1 ನೇ ಆರೋಪಿ ಪರ ಶ್ರೀ.ಎಸ್.ಬಿ.ಜೆ ವಕೀಲರಿಂದಃ</u>**

ನಾನು ಮುಧೋಳದಲ್ಲಿ ಸುಮಾರು 20 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ನಾನು ವಿದ್ಯಾಬ್ಯಾಸ ಸಂಸ್ಥೆಗಳನ್ನು ನಡೆಸುತ್ತೇನೆ ಎಂದರೆ ಸರಿ. ನಾನು ಸಂಗೀತ ಶಾಲೆಯನ್ನು ಸಹ ನಡೆಸುತ್ತೇನೆ ಎಂದರೆ ಸರಿ.

ನಾನು ವಾಸ ಮಾಡುವ ಮನೆಯ ನಂಬರ ನೆನಪಿಲ್ಲ. ನಾನು ಆಗ ವಾಸಿಸುತ್ತಿದ್ದ ಮನೆ ಡಾಃ ಗೀರಿಜಾ ಅವರಿಗೆ ಸೇರಿದ್ದಾಗಿದೆ. ಆ ಮನೆಗೆ ಮುಂದಿನ ಮತ್ತು ಹಿಂದಿನ ಎರಡು ಬಾಗಿಲುಗಳು ಇವೆ ಮತ್ತು ಮನೆಯ ಒಳಗೆ ಇರುವ ಬೆಡ್ ರೂಂ ಕೊಠಡಿಗಳಿಗೆ ಎರಡು ಬಾಗಿಲುಗಳು ಇವೆ.

ನಾನು ನ್ಯಾಯಾಲಯದಲ್ಲಿ ಕುಳಿತಿರುವ ಎಡಗಡೆಯಿಂದ ಮೊದಲ ವ್ಯಕ್ತಿಯಾಗಿ ಕುಳಿತಿರುವ ವವ್ಯಕ್ತಿಯನ್ನು ಇದೆ ಮೊದಲು ನೋಡುತ್ತಿದ್ದೇನೆ ಎಂದರೆ ಸರಿಯಲ್ಲಿ ಸಾಕ್ಷಿಯು ಮೊದಲಿನಿಂದಲೆ ನೋಡಿದ್ದೇನೆ ಎಂದು ನುಡಿಯುತ್ತಾರೆ.

**<u>ನ್ಯಾಯಾಲಯದ ಪ್ರಶ್ನೆಃ</u> ಆ ರೀತಿ ಕುಳಿತಿದ್ದ ವ್ಯಕ್ತಿಯ ಹೆಸರನ್ನು ನ್ಯಾಯಾಲಯ ಕೇಳಲಾಗಿ ಆತನು ತನ್ನ ಹೆಸರನ್ನು ಹನಮಂತ ಚೌಧರಿ ಎಂದು ನುಡಿದಿರುತ್ತಾರೆ.**

ನಾನು ಕಳ್ಳತನವಾದ ಈ ಪ್ರಕರಣದ ಬಂಗಾರವನ್ನು ಯಾವಾಗ ಖರೀದಿಸಿದ್ದೇನೆ ಎಂದರೆ ಸಾಕ್ಷಿ ಆಗಾಗ ತುಂಬಾ ವರ್ಷಗಳಿಂದ ಖರೀದಿಸಿದ್ದೇನೆ, ಆದರೆ ಎಲ್ಲಿ ಯಾವಾಗ ಯಾವ ಪತ್ತಾರ ಮತ್ತು ಯಾವ ಆಭರಣ ಅಂಗಡಿಯಿಂದ ಖರೀದಿಸಿದ್ದೇನೆ ಎಂಂದು ಹೇಳಲು ಆಗುವುದಿಲ್ಲ.

ಈ ನ್ಯಾಯಾಯದ ಆದೇಶದಿಂದ ಬಂಗಾರವನ್ನು ಮರಳಿ ಪಡೆದುಕೊಂಡಿದ್ದೇನೆ. ನಾನು ಈ ಪ್ರಕರಣದಲ್ಲಿ ಜಪ್ತಿಮಾಡಿಕೊಂಡ ಆಭರಣಗಳು ನನಗೆ ಸೇರಿದ್ದಲ್ಲ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಪಡೆದುಕೊಂಡ ಆಭರಣಗಳು ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಪಡೆದುಕೊಂಡ ಆಭರಣಗಳು ಈಗ ನನ್ನ ತಾಬಾದಲ್ಲಿವೆ. ಸದರಿ ಆಭರಣಗಳು ಬೇರೆ ಯಾರಿಗೂ ಸೇರಿದ ಆಭರಣಗಳನ್ನು ನನ್ನದು ಎಂದು ಸುಳ್ಳು ಹೇಳಿ ಪಡೆದುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯ ಆದೇಶ ಮಾಡಿದರೆ ನ್ಯಾಯಾಲಯದಿಂದ ಪಡೆದುಕೊಂಡ ಎಲ್ಲಾ ಆಭರಣಗಳನ್ನು ಮರಳಿ ಹಾಜರುಪಡಿಸಲು ಸಿದ್ದಳಿದ್ದೇನೆ.

1 ನೇ ಆರೋಪಿಯು ನಮ್ಮ ಮನೆಯಲ್ಲಿ ಕಾರು ಚಾಲಕನು ಇದ್ದ ಎಂದು ಹೇಳುವುದು ಸುಳ್ಳು ಎಂದರೇ ಸರಿಯಲ್ಲ. 1 ನೇ ಆರೋಪಿಯು ಯಾವ ಕಾಲಕ್ಕೂ ಕಾರು ಚಾಲಕನಾಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ಮನೆಯಲ್ಲಿ ಯಾವುದೇ ಆಭರಣಗಳನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಆತನಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ-1 ಮತ್ತು 2 ರ ವಸ್ತುಗಳು ನಮ್ಮ ಮನೆಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಮು.ಮಾ-3 ನ್ನು ನಮ್ಮ ಸವುಕ್ಷಮ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯಲ್ಲಿ ಯಾವುದೇ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಫಿರ್ಯಾದನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 1 ನೇ ಆರೋಪಿ ಪರ ವಕೀಲರು ಪಾಟಿ ಸವಾಲು ಮುಗಿದಿದೆ ಎಂದು ನುಡಿದಿರುತ್ತಾರೆ.

**ಪಾಟಿ ಸವಾಲುಃ 5 ನೇ ಆರೋಪಿ ಪರ ಶ್ರೀ.ಎಚ್.ಕೆ.ಬಿ ವಕೀಲರಿಂದಃ**

ಈ ಪ್ರಕರಣ ಕಳ್ಳತನವಾಗಿರುವುದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಯಾರು ಕಳ್ಳತನ ಮಾಡಿದ್ದಾರೆ ಎಂದು ಗೊತ್ತು. ಕಳ್ಳತನವನ್ನು ಹಣಮಂತ ಚೌಧರಿ ಮತ್ತು ಆತನ ಜೊತೆಗಿದ್ದ ಐದು ಜನರು ಮಾಡಿದ್ದಾರೆ.ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲ, ಪೋಲಿಸರು ಹೇಳಿದಂತೇ ಫಿರ್ಯಾದನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಆರೋಪಿಯು ಘಟನೆಯ ದಿನ ಘಟನೆ ಸ್ಥಳದಲ್ಲಿ ಇರಲೇ ಇಲ್ಲ ಮತ್ತು ಆತ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರು ಸಹ ಪೋಲಿಸರು ಆತನನ್ನು ಸಹ ಈ ಪ್ರಕಣದಲ್ಲಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 5 ನೇ ಆರೋಪಿ ಪರ ವಕೀಲರು ಪಾಟಿ ಸವಾಲು ಮುಗಿದಿದೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟಿ ಸವಾಲಿಗಾಗಿ ಮದ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )
ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

**<u>ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

**<u>ದಿ</u>ನಾಂಕ: 11-12-2023 ರಂದು ಮದ್ಯಾಹ್ನ 3-00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟಿ ಸವಾಲು:</u>** 5 ನೇ ಆರೋಪಿ ಪರ ಶ್ರೀ.ಎಚ್.ಐ. ಹೆಚ ವಕೀಲರು 1 ಮತ್ತು 5 ರವರು ಪಾಟಿ ಸವಾಲನ್ನು ಅನುಮೊದಿಸುತ್ತೇನೆ ಎಂದು ನುಡಿದಿರುತ್ತಾರೆ.

**<u>ಪಾಟಿ ಸವಾಲು: 3 ನೇ ಆರೋಪಿ ಪರ ಶ್ರೀ ಟಿ.ಆರ್.ಹೆಚ ವಕೀಲರಿಂದ:</u>**

ಮನೆ ಕಳ್ಳತನವು ದಿನಾಂಕ 12 ತಾರೀಕಿಗೆ ಆಗಿರುತ್ತದೆ. ಪಿರ್ಯಾದನ್ನು ನಾನೇ ಖುದ್ದು ನೀಡಿರುತ್ತೇನೆ. ಪಿರ್ಯಾದನ್ನು ದಿನಾಂಕ 13 ತಾರೀಕಿಗೆ ನೀಡಿರುತ್ತೇನೆ. 17 ತೋಲೆ ಬಂಗಾರ ಕಳ್ಳತನವಾಗಿದೆ ಎಂದು ಪಿರ್ಯಾದನ್ನು ನೀಡಿದ್ದೇನೆ. ಪಿರ್ಯಾದಲ್ಲಿ ಆಭರಣದ ಅಂದಾಜು ಮೌಲ್ಯವನ್ನು ರೂ 1,50,000 ಎಂದು ಎಂದು ಬರೆಸಿದ್ದೇನೆ. ನಂತರ ಪುನರ ಹೇಳಿಕೆಯಲ್ಲಿ ರೂ.4,50,000/- ಎಂದು ಬರೆಸಿದ್ದೇನೆ. ಈ ಕಳ್ಳತನವನ್ನು ಎಷ್ಟು ಜನರು ಮಾಡಿದ್ದಾರೆ ಎಂದು ನನಗೆ ಪಿರ್ಯಾಧಿ ನೀಡಿದ ಎರಡು ದಿನಗಳ ನಂತರ ಗೊತ್ತಾಯಿತು. ಆರೋಪಿಗಳನ್ನು ನನಗೆ ಪೋಲಿಸರು ತೋರಿಸಿದ್ದಾರೆ. ಯಾವ ಯಾವ ಆರೋಪಿತರು ಏನು ಮಾಡಿದ್ದಾರೆ ಎಂದು ನಿಖರವಾಗಿ ಹೇಳಿಲ್ಲ ಆದರೆ ಅವರೆಲ್ಲ ಒಟ್ಟಿಗೆ ಕಳ್ಳತನ ಮಾಡಿರುವುದರ ಕುರಿತು ತಿಳಿಸಿರುತ್ತಾರೆ.

3 ನೇ ಆರೋಪಿಯು ಭಾರತೀಯ ಸೇನಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ ಎಂದರೆ ಗೊತ್ತಿಲ್ಲ.

3 ನೇ ಆರೋಪಿಯು ಬೇರೆ ಆರೋಪಿತರಿಗೆ ಬ್ಯಾಂಕಿನಲ್ಲಿ ಸದರಿ ಕಳ್ಳತನ ಮಾಡಿದ ಬಂಗಾರವನ್ನು ಅಡ ಇಡಿಸಲು ಸಹಾಯ ಮಾಡಿದ್ದಾನೆ ಎಂದು ಚಾರ್ಜಶೀಟನಲ್ಲಿ ಪೋಲಿಸರು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಅದರ ಕುರಿತು ನನಗೆ ಮಾಹಿತಿ ಇಲ್ಲ.

3 ನೇ ಆರೋಪಿಯು ಕಳ್ಳತನದ ಘಟನೆಯಾಗುವ ಹಿಂದೆ ಎರಡು ದಿನ ಹಿಂದೆ ಸೇನೆಯಿಂದ ರಜೆಯ ಮೇಲೆ ಲೋಕಾಪುರಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ಅದರ ಕುರಿತು ನನಗೆ ಮಾಹಿತಿ ಇಲ್ಲ. ಆರೋಪಿತರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು ನ್ಯಾಯಾಲಯಕ್ಕೆ ಸಾಕ್ಷ ನುಡಿಯಲು ಬಂದಿದ್ದೇನೆ ಎಂದರೆ ಸಾಕ್ಷಿ ಈ ದಿನವೆ ಮೊದಲ ಬಾರಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಆತನನ್ನು ತಪ್ಪಾಗಿ ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

ಈ ರೀತಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

**ನ್ಯಾಯಾಲಯದ ಪ್ರಶ್ನೆ :** ನಾನು ಕಳ್ಳತನವಾದ ನಂತರ ನನ್ನ ಆಭರಣಗಳನ್ನು ಮತ್ತೆ ಮೊದಲ ಬಾರಿ ಎಲ್ಲಿ ನೋಡಿದ್ದಿರಾ ?

**ಉತ್ತರ :** ಪೋಲಿಸರು ಠಾಣೆಗೆ ಕರೆಯಿಸಿ ನನಗೆ ಆಭರಣಗಳನ್ನು ತೋರಿಸಿದ್ದಾರೆ ನಾನು ನನ್ನ ಆಭರಣಗಳನ್ನು ಗುರುತಿಸಿದ್ದೇನೆ.

**ನ್ಯಾಯಾಲಯದ ಪ್ರಶ್ನೆ :** ಕಳ್ಳತನವಾದ ಬಂಗಾರದ ಆಭರಣಗಳನ್ನು ನಾನು ಮರಳಿ ಮಾನ್ಯ ನ್ಯಾಯಾಲಯದಿಂದ ಪಡೆದಾಗ ಅದರ ತೂಕವಾಗಲಿ ಮತ್ತು ಅದರ ಸ್ವರೂಪ ಏನಾದರೂ ಬದಲಾವಣೆ ಇತ್ತೆ ?

**ಉತ್ತರ :** ಕಳ್ಳತವಾದಾಗ ಯಾವ ಸ್ಥಿತಿಯಲ್ಲಿತ್ತು ನಾನು ಮರಳಿ ಪಡೆದಾಗ ಅದೆ ಸ್ಥಿತಿಯಲ್ಲಿತ್ತು.

ಎಲ್ಲಾ ಆರೋಪಿ 1 ಮತ್ತು 3 ರಿಂದ 5 ರವರ ಪರ ವಕೀಲರು ಪಾಟಿ ಸವಾಲು ಮುಗಿದಿದೆ ನುಡಿದಿರುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )
ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ